ವಿಷಯ :— ಪ್ರತಿ ವಿಧಾನಸಭಾ ಕ್ಷೇತ್ರದ ಗ್ರಾಮೀಣ ರಸ್ತೆಗಳ ದುರಸ್ತಿಗೆ ಹಣ ಬಿಡುಗಡೆ ಮಾಡುವ ಕುರಿತು.

14(38) ಶ್ರೀ ಉಜ್ಜಿನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಗ್ರಾಮೀಣಾಭಿವೃದ್ಧಿ ಸಚಿವರು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 50.00 ಲಕ್ಷ ರೂಪಾಯಿಗಳನ್ನು ಗ್ರಾಮೀಣ ರಸ್ತೆಗಳ ದುರಸ್ತಿಗೆ ಬಿಡುಗಡೆ ಮಾಡಲಾಗುವುದೆಂದು ಹೇಳಿದ್ದು ನಿಜವೇ?

(ಆ) ಹಾಗಿದ್ದಲ್ಲಿ ಯಾವಾಗ ಅದನ್ನು ಬಿಡುಗಡೆ ಮಾಡಲಾಗುವುದು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

(ಅ) ಇಲ್ಲ

(ಆ) ಉದ್ಭವಿಸುವುದಿಲ್ಲ.

ಶ್ರೀ ಯು.ಬಿ. ಬಣಕಾರ್ :— ಮಾನ್ಯ ಅಧ್ಯಕ್ಷರೇ, ಹಿರಿಯ ಸಚಿವರಾದ ಮಾನ್ಯ ಎಂ.ಪಿ. ಪ್ರಕಾಶ್ ಅವರ ಕಡೆಯಿಂದ ನಾನು ಈ ರೀತಿಯ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ನಾನು ಕೇಳಿದ ಪ್ರಶ್ನೆ ಏನೆಂದರೆ ಗ್ರಾಮೀಣಾಭಿವೃದ್ಧಿ ಸಚಿವರು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 50 ಲಕ್ಷ ರೂಪಾಯಿಗಳನ್ನು ಪ್ರತಿ ಗ್ರಾಮೀಣಾ ರಸ್ತೆಗಳ ದುರಸ್ತಿಗೆ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದು ನಿಜವೇ ಎಂದು ಕೇಳಿದ್ದೆ. ಅವರು ನಾನು ಆ ರೀತಿ ಹೇಳಿಲ್ಲ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಡಿಸೆಂಬರ್ 27ನೇ ತಾರೀಖಿನ ಸಂಜೆ ಪತ್ರಿಕೆಗಳಲ್ಲಿ ಹಾಗೂ ದೂರದರ್ಶನ ಮತ್ತು ಆಕಾವಾಣಿಗಳಲ್ಲಿ ಡಿಸೆಂಬರ್ 28ನೇ ತಾರೀಖಿನ ರಾಜ್ಯದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಮಾನ್ಯ ಸಚಿವರಾದ ಪ್ರಕಾಶ್ ಅವರು ಹೇಳಿದ್ದು ಪ್ರಕಟವಾಗಿದೆ. ಅದರಲ್ಲಿ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತೀರಾ ಹದಗೆಟ್ಟಿರುವ ರಸ್ತೆಗಳ ದುರಸ್ಥಿತಿಗೆ ಶಾಸಕರ ವಿವೇಚನೆಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 50 ಲಕ್ಷ ರೂಪಾಯಿಗಳು ಸಧ್ಯದಲ್ಲಿಯೇ ಬಿಡುಗಡೆಯಾಗಲಿದೆ. ಈ ವಿಷಯವನ್ನು ಸುದ್ದಿಗಾರರಿಗೆ ತಿಳಿಸಿದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಂ.ಪಿ. ಪ್ರಕಾಶ್ ಈ ಯೋಜನೆಗೆ ಒಟ್ಟು 100 ಕೋಟಿ ರೂಪಾಯಿಗಳು ಬಿಡುಗಡೆಯಾಗಲಿದೆ ಎನ್ನುವ ಮಾತನ್ನು ಹೇಳಿದ್ದು

ಅಲ್ಲಿದೆ ಪ್ರಸ್ತಾವನೆಗಳನ್ನು ಶಾಸಕರಿಂದ ತರಿಸಿಕೊಳ್ಳಲಾಗುವುದು ಎನ್ನುವ ಮಾತನ್ನು ಸಹ ತಾವು ಹೇಳಿದ್ದೀರಿ. ಈ ರೀತಿ ಹೇಳಿದ್ದು ಸುಳ್ಳೆ. ತಮಗೆ ಗೊತ್ತಿದೆ ಗ್ರಾಮೀಣ ರಸ್ತೆಗಳು ಯಾವ ರೀತಿ ಹದಗೆಟ್ಟಿವೆ ಎನ್ನುವುದು, ಕೊನೆಯ ಪಕ್ಷ ಆ ರಸ್ತೆಗಳಿಗೆ ಯಾವಾಗ ಕಾಯಕಲ್ಪ ಕೊಡುತ್ತೀರಿ ಎನ್ನುವ ಮಾತನ್ನು ನಾನು ತಿಳಿಯಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:— ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪಂಚಾಯತಿಯಿಂದ ಈ ಹಣವನ್ನು ಕೊಡುತ್ತೇವೆಂದು ಅಲ್ಲ. ಲೋಕೋಪಯೋಗಿ ಇಲಾಖೆಯಿಂದ ಪ್ರತಿಯೊಬ್ಬ ಶಾಸಕರಿಗೂ ಕೂಡ ತಮ್ಮ ಕ್ಷೇತ್ರದಲ್ಲಿ 50 ಲಕ್ಷ ರೂಪಾಯಿಗಳ ರಸ್ತೆಗಳ ನಿರ್ಮಾಣ ಮಾಡಲಿಕ್ಕಾಗಿ ನೂರು ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿ, ಅದನ್ನು ಆ ಕ್ಷೇತ್ರದ ಶಾಸಕರ ಶಿಫಾರಸ್ಸಿನ ಮೇಲೆ ಕೈಗೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಜಿಲ್ಲಾ ಪಂಚಾಯತಿ ವತಿಯಿಂದ ಅಥವಾ ಗ್ರಾಮೀಣ ಅಭಿವೃದ್ಧಿ ಇಲಾಖೆ ವತಿಯಿಂದ ಹಣ ಕೊಡುತ್ತೇವೆಂದು ಹೇಳಿಲ್ಲ. ನಿಮ್ಮ ಪ್ರಶ್ನೆ ಏನು ಇದೆ ಅಂದರೆ ಗ್ರಾಮೀಣ ಅಭಿವೃದ್ಧಿ ಸಚಿವರು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 50 ಲಕ್ಷ ರೂಪಾಯಿಗಳನ್ನು ಗ್ರಾಮೀಣ ಅಭಿವೃದ್ಧಿ ರಸ್ತೆಗಳ ದುರಸ್ಥಿತಿಗೆ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದು ನಿಜವೇ ಎಂದು ಕೇಳಿದ್ದೀರಿ ಅದಕ್ಕೆ ನಾನು ಇಲ್ಲ ಎಂದು ಹೇಳಿದ್ದೇನೆ. ಹಾಗಿದ್ದಲ್ಲಿ ಆ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ಎಂದು ಕೇಳಿದ್ದಕ್ಕೆ ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಯು.ಬಿ. ಬಣಕಾರ್:— ಶಾಸಕರು ಯಾರೂ ಬಂದು ಹಣ ಕೇಳಿಲ್ಲ. ತಾವೇ ಹೇಳಿದಿರಿ ಲೋಕೋಪಯೋಗಿ ಇಲಾಖೆಯಿಂದ ಹಣ ಬಿಡುಗಡೆ ಮಾಡಲಾಗುವುದೆಂದು. ಆದರೆ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ಆಗಲಿ ಅಥವಾ ಲೋಕೋಪಯೋಗಿ ಇಲಾಖೆಯಿಂದ ಆಗಲಿ ಯಾವಾಗ ಹಣ ಬಿಡುಗಡೆ ಮಾಡುತ್ತೀರಿ ಎಂದು ಹೇಳಿದರೆ ಸಾಕು.

ಶ್ರೀ ಎಂ.ಪಿ.ಪ್ರಕಾಶ್:— ನಾನು ಪತ್ರಿಕೆಗಳಲ್ಲಿ ಹೇಳಿದ್ದು ಸರ್ಕಾರ ನೂರು ಕೋಟಿ ರೂಪಾಯಿಗಳ ಒಂದು ಸಂಚಿತ ನಿಧಿ ಮಾಡಿಕೊಂಡು ಪ್ರತಿಯೊಬ್ಬ ಶಾಸಕರು 50 ಲಕ್ಷ ರೂಪಾಯಿಗಳ ಶಿಫಾರಸ್ಸು ಮಾಡಿದಂತಹ ರಸ್ತೆಗಳ ಕೆಲಸವನ್ನು ಕೈಗೊಳ್ಳಬೇಕು ಎಂದು ಆಗಿದೆ. ಅದನ್ನು ಬೇಗ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:— ಮಾನ್ಯ ಅಧ್ಯಕ್ಷರೇ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಸಹ ಮಲೆನಾಡು ಅಭಿವೃದ್ಧಿ ಮಂಡಲಿ ವಿಷಯದಲ್ಲಿ ಇದೇ ರೀತಿ ನಮಗೆ ಟೋಪಿ ಹಾಕಿದರು. ನಾವು ನೇರವಾಗಿ ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಕೇಳಿದಾಗ ಈಗ ಹನ್ನೇರಡೂವರೆ ಗಂಟೆಗೆ ಆಗಿದೆ ಒಂದೂಕಾಲಿಗೆ ಎಂದು ಹೇಳಲೇ ಎಂದು ಹೇಳಿದರು. ಈಗ ಇಡೀ ರಾಜ್ಯದಲ್ಲಿ ಒಬ್ಬೊಬ್ಬ ಶಾಸಕರ ಕ್ಷೇತ್ರಕ್ಕೆ 50 ಲಕ್ಷ

ರೂಪಾಯಿಗಳನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದೀರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಈ ವಾರದಲ್ಲಿ ಬಿಡುಗಡೆ ಮಾಡಿದರೆ ಅದಕ್ಕೆ ಒಂದು ರೂಪ ಬರುತ್ತದೆ. ದಯವಿಟ್ಟು ಒಂದು ವಾರದಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಸರ್ಕಾರದಲ್ಲಿ ಆಗಿರುವ ನಿರ್ಧಾರವನ್ನು ನಾನು ಪತ್ರಿಕೆಗಳಿಗೆ ಹೇಳಿದೆ. ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರು ಈ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದಾರೆ. ಮಳೆಗಾಲದಲ್ಲಿ ಈ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು ನಮಗೆ ಗೊತ್ತು ಆದ್ದರಿಂದ ಅತಿ ಶೀಘ್ರವಾಗಿ ಈ ಕೆಲಸ ಮಾಡುತ್ತೇವೆ. ನಾನು ನೇರವಾಗಿ ಇಂತಿಷ್ಟೇ ಅವಧಿ ಎಂದು ಹೇಳಲಾರೆ. ಆದರೆ ಆದಷ್ಟು ಬೇಗನೆ ಎಂದು ಹೇಳಬಯಸುತ್ತೇನೆ. ಏಕೆಂದರೆ ನಿಮಷ್ಟೇ ನಾವು ಕೂಡ ಉತ್ಸುಕರಾಗಿದ್ದೇವೆ. ನಾನು ಮಂತ್ರಿಯಾಗಿದ್ದರೂ ಕೂಡ ಶಾಸಕನೂ ಕೂಡ ಆಗಿರುವುದರಿಂದ ನನ್ನ ಕ್ಷೇತ್ರಕ್ಕೂ 50 ಲಕ್ಷ ರೂಪಾಯಿಗಳು ಬರುತ್ತವೆ.

ಶ್ರೀ ಮಾಟಾಳ್ ನಾಗರಾಜ್ :— ತಾವುಗಳು ಸರಕಾರದ ನಿರ್ಧಾರವನ್ನು ಹೇಳಿದ್ದೀರಿ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಆ ನಿರ್ಧಾರದ ಪ್ರಕಾರವಾಗಿ ಸರಕಾರದವರು ಕಟ್ಟುನಿಟ್ಟಾಗಿ ಯಾವಾಗಿನಿಂದ ಕೊಡುತ್ತೀರಿ ಎಂಬುದನ್ನು ತಾವುಗಳು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಆದಷ್ಟು ಶೀಘ್ರವಾಗಿ ಈ ಹಣವನ್ನು ಬಿಡುಗಡೆ ಮಾಡುತ್ತೇವೆ.

ಅಧ್ಯಕ್ಷರು :— ಪ್ರಶ್ನೋತ್ತರಗಳು ಮುಗಿದವು.

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, 2ನೇ ಪಟ್ಟಿಯಲ್ಲಿರುವ ಈ ಸಮೂಹದ ಲಿಖಿತ ಮೂಲಕ ಉತ್ತರಿಸುವ ಒಟ್ಟು 42 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಹಿರೇಕೆರೂರು ತಾಲ್ಲೂಕಿನಲ್ಲಿ ಆರೋಗ್ಯ ಇಲಾಖೆಯಿಂದ ತೆಗೆದುಕೊಂಡ ಯೋಜನೆಗಳು.

24(11) ಉಚ್ಚೈಗೆನೇಶ್ವರ ಬವಸವನಪ್ಪ ಬಣಕಾರ್ (ಹಿರೇಕೆರೂರು):— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ದವಾಖಾನೆಗಳ ಕಟ್ಟಡ ನಿರ್ಮಾಣದ ಬಗ್ಗೆ ತೆಗೆದುಕೊಂಡ ಯೋಜನೆಗಳು ಯಾವುವು;

ಆ) ಅವುಗಳು ಯಾವ ಹಂತದಲ್ಲಿವೆ ಹಾಗೂ ಯಾವಾಗ ಪೂರ್ಯೆಸಲಾಗುವುದು?